ಕರ್ನಾಟಕ ಸರ್ಕಾರ

# ಉಪನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಮೈಸೂರು ಜಿಲ್ಲೆ, ಮೈಸೂರು

E-mail Id :ddpimys@gmail.com&ddpi.edu.karmys@nic.in Telephone No : 0821-2490025

---------

ಸಂಖ್ಯೆ: ಎ10/8701/ಚಿಗುರು ಕಾರ್ಯಕ್ರಮಅನುಮತಿ/01/2024-25 /3099 ದಿನಾಂಕ: 08-01-2025

-: ಜ್ಞಾಪನ :-

*ವಿಷಯ:-* ಯೂತ್ ಫಾರ್ ಸೇವಾ ಸಂಸ್ಥೆಯವರು ಆಯೋಜಿಸಿರುವ "ಚಿಗುರು" ಕಾರ್ಯಕ್ರಮದಲ್ಲಿ ಶಾಲಾ ವಿದ್ಯಾರ್ಥಿಗಳು ಭಾಗವಹಿಸಲು ಅನುಮತಿ ನೀಡುವ ಬಗ್ಗೆ

ಉಲ್ಲೇಖ:- ಸಂಯೋಜಕರು ಯೂತ್ ಫಾರ್ ಸೇವಾ ಸಂಸ್ಥೆ, ಮೈಸೂರು (ರಿ) ರವರ ಮನವಿ

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ ಪತ್ರದಲ್ಲಿ , ಯೂತ್ ಫಾರ್ ಸೇವಾ ಸಂಸ್ಥೆ, ಮೈಸೂರು ರವರು ದಿನಾಂಕ: 09-02-2025 ರಂದು ವಿದ್ಯಾವರ್ಧಕ ಕಾಲೇಜು ವಿಜಯನಗರ, ಮೈಸೂರು ಇಲ್ಲಿ ಸಮಯ ಬೆಳಿಗ್ಗೆ 8-00 – ರಿಂದ ಸಂಜೆ 4-30 ರವರೆಗೆ ನಡೆಸಲಾಗುವ ಚಿಗುರು ಕಾರ್ಯಕ್ರಮದಲ್ಲಿ ಸರ್ಕಾರಿ ಶಾಲಾ ಮಕ್ಕಳ ವ್ಯಕ್ತಿತ್ವ ವಿಕಸನ ಉಲ್ಬಣಗೊಳಿಸುವ ಸಲುವಾಗಿ ಶಾಲಾ ವಿದ್ಯಾರ್ಥಿಗಳಿಗೆ ಸಾಂಸ್ಕೃತಿಕಮತ್ತು ಕ್ರಿಡಾ ಸ್ಪರ್ದೆಗಳನ್ನು ಆಯೋಜಿಸಿದೆ. ಈ ಕಾರ್ಯಕ್ರಮದಲ್ಲಿ ಭಾಗವಹಿಸಲು 45 ಶಾಲೆಗಳನ್ನು ಆರಿಸಲಾಗಿದ್ದು, ಪ್ರತಿ ಶಾಲೆಯಿಂದ ಮಕ್ಕಳ ಜೊತೆ ಒಬ್ಬರು ಶಿಕ್ಷಕರು ಭಾಗವಹಿಸಲು ಅನುಮತಿ ನೀಡಿದೆ. ಈ ಸಂಬಂಧ ಮೈಸೂರು ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳು ಸಂಬಂಧಿಸಿದ ಶಾಲಾ ಮುಖ್ಯಸ್ಥರಿಗೆ "ಚಿಗುರು" ಕಾರ್ಯಕ್ರಮದಲ್ಲಿ ಭಾಗವಹಿಸಲು ಅಗತ್ಯ ಕ್ರಮ ವಹಿಸಲು ಸೂಕ್ತ ನಿರ್ದೇಶನ ನೀಡಲು ತಿಳಿಸಿದೆ. ಹಾಗೂ ಸಂಸ್ಥೆಯವರು ಶಾಲೆಗಳಿಗೆ ನೀಡುವ ಸೌಲಭ್ಯಗಳನ್ನು ಸೂಕ್ತ ರೀತಿಯಲ್ಲಿ ಬಳಸಿಕೊಳ್ಳಲು ಮತ್ತು ಶಾಲಾ ಕಾರ್ಯಕ್ಕೆ ತೊಂದರೆಯಾಗದಂತೆ ಅಗತ್ಯ ಕ್ರಮವಹಿಸಲು ತಿಳಿಸಿದೆ.

ಉಪ ನಿರ್ದೇಶಕರು (ಆಡಳಿತ)
ಸಾರ್ವಜನಿಕ ಶಿಕ್ಷಣ ಇಲಾಖೆ, ಮೈಸೂರು ಜಿಲ್ಲೆ

ಗೆ,

ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ. ಮೈಸೂರು ತಾಲ್ಲೂಕು ವಲಯ, ಉತ್ತರವಲಯ, ದಕ್ಷಿಣ ವಲಯ, ಹುಣಸೂರು ತಾಲ್ಲೂಕು ರವರಿಗೆ ಅಗತ್ಯ ಕ್ರಮಕ್ಕಾಗಿ

ಪ್ರತಿಯನ್ನು:- 1) ಸಂಯೋಜಕರು ಯೂತ್ ಫಾರ್ ಸೇವಾ ಸಂಸ್ಥೆ, ಮೈಸೂರು
2) ಕಛೇರಿ ಪ್ರತಿ